ಒಂದಾಣೆ ಮಾಲೆ 331

ಬಸುರಿಯ ಹಾಡು

ಮತ್ತು

ಶ್ರೀ ಕೃಷ್ಣ-ಸತ್ಯಭಾಮಾ ಸಂವಾದ

(ಜಾನಪದ ಸಾಹಿತ್ಯ)

*

ಸಂಗ್ರಾಹಕ:
ಪಡಾರು ಮಹಾಬಲೇಶ್ವರ ಭಟ್ಟ, ಕೊಳನಾಡು.

*

1961

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

ಬಸುರಿಯು ಹಾಡು

ಮತ್ತು

ಶ್ರೀಕೃಷ್ಣ-ಸತ್ಯಭಾಮಾ ಸಂವಾದ

(ಜಾನಪದ ಸಾಹಿತ್ಯ)

೧. ಬಸುರಿಯು ಹಾಡು

ಕನ್ನಡನಾಡಿನ ಜಾನಪದ ಸಾಹಿತ್ಯವು ದೇಶಕಾಲಗಳನ್ನು ಅನುಸರಿಸಿ ಬಹುವಿಧವಾಗಿದೆ. ಈ ವೈವಿಧ್ಯವು ಭಾಷೆ ಮತ್ತು ವಸ್ತುಗಳಲ್ಲಿಯೇ ಹೆಚ್ಚಾಗಿದ್ದು ಕಲ್ಪನೆಯಲ್ಲಿ ಪರಸ್ಪರ ಸಾಮ್ಯವೂ ಅತಿಯಾಗಿ ಕಂಡು ಬರುತ್ತದೆ. ಮಂಗಳೂರಿನ, ಧಾರವಾಡದ, ಮೈಸೂರಿನ ಅಂತರವಿರುವ ಕನ್ನಡದ ಪ್ರಭಾವ ಜಾನಪದ ಸಾಹಿತ್ಯದಲ್ಲಿ ಬೀಳದೆ ಇಲ್ಲ. ಅದಕ್ಕೂ ಹೆಚ್ಚೆಂದರೆ ಜಾನಪದ ಸಾಹಿತ್ಯವು ಕುರಿತು ಓದದವರ ತೊದಲ್ನುಡಿಯೆಂದು ಧಾರಾಳವಾಗಿ ಹೇಳಬಹುದು. ನುಡಿ ತೊದಲಿರಬಹುದು. ಆದರೆ ಹೃದಯ ಭಾವಪೂರ್ಣವಾದುದು; ಪ್ರಭಾವಿಯಾದುದು.

ಮಂಗಳೂರಿನ ಮನೆಮಾತಿನ ಕನ್ನಡಿಗರಲ್ಲಿ ತ್ರಿಪದಿಯೇ ಜಾನಪದ ಸಾಹಿತ್ಯದಲ್ಲಿ ಹೆಚ್ಚಿಗೆ ಬಳಕೆಗೆ ಬಂದಿದೆ. ಬೆಳಗಿನಿಂದ ಸಂಜೆಯು ತನಕ ದುಡಿದು ಒಟ್ಟಿಗೆ ಆಯಾ ಸಂದರ್ಭಸನ್ನಿವೇಷಗಳಿಗೆ ತಕ್ಕಂತೆ ಹಾಡುವ ರೂಢಿಯನ್ನು ಗ್ರಾಮೀಣ ಹೆಣ್ಣುಮಕ್ಕಳು ಇಟ್ಟುಕೊಂಡಿರುವರು. ಈಗ ನಮ್ಮ ಮುಂದಿರುವ ಬಸುರಿಯು ಹಾಡು ಮಕ್ಕಳನ್ನು ತೂಗುವಾಗ ಹೇಳುವಂಥಾದ್ದಾದರೂ, ಬಯಕೆಯು ಕುಡಿಯಾಗಿ ಹಿಂದಿನ ಸವಿನೆನಪನ್ನು ತರುವಂಥಾದ್ದಾಗಿದೆ. ಮುಂದೆ ಆ ಹಾಡನ್ನು ಪರಿಚಯಮಾಡಿಕೊಡಲಾಗಿದೆ.

ತಾಯಿಯು ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ, "ಓಓಓಮೆಂ ಬಾಲಂಗೆ ಓಓಓಮೆಂ" ಎನ್ನುತ್ತಾಳೆ. ಮಗುವಿನ ಮೊಗ ನೋಡಿ ಅವಳಿಗೆ ಹಿಂದಿನ ನೆನಪಾಗಿ ಅದು ಕವಿತೆಯಾಗಿ ಹರಿಯುತ್ತದೆ. ತಾನು ಮಗುವನ್ನು ಹೆರುವ ಮುನ್ನ ಮಕ್ಕಳಿಗಾಗಿ ಹಲುಬಿದ್ದು, ಮತ್ತೆ ಬಸುರು

ಹೊತ್ತುದು, ಬಸುರಿಗೆ ಜಯಕೆಯು ಗಾಜಿಯಾದ್ದು, ಎಲ್ಲವೂ ಅವಳ ಹಾಡಾಗುತ್ತದೆ. ಅವಳು ಮತ್ತೊಮ್ಮೆ "ಓಓಓವೆಂ ಬಾಲಂಗೆ ಓಓಓವೆಂ" ಎಂದು,—

ಗುರು ಗಣಪತಿಯರ ದೇವಿ ಸರಸ್ವತಿಯರ
ವರಕವಿ ಜನರ ಸ್ಮರಿಸುತ್ತ । ಸ್ಮರಿಸುತ್ತ ಸಂತಸದಿ
ಸುರಪಾದ್ಯ ಮಾರಂಗೆರಗುತ್ತ ॥ ೧ ॥
ಧರೆಯೊಳತ್ಯಧಿಕವಾಗಿರ್ದ ದೇಶದ ರಾಯು
ನರಸಿ ಸಂತಸದಿ ಧರಿಸಿರ್ದ । ಧರಿಸಿರ್ದ ಗರ್ಭವ
ಪರಿಯಾನುಸರುವೆ ಮುದದಿಂದ ॥ ೨ ॥

—ಹಾಡನ್ನು ಅರಂಭಿಸುತ್ತಾಳೆ. ಇದು ಒಂದು ಜಾನಪದ ಕತೆ. ಯಾವುದೋ ಒಂದು ರಾಜ್ಯ; ರಾಜ್ಯಕ್ಕೊಬ್ಬ ರಾಜ; ರಾಜನಿಗೊಬ್ಬ ಅರಸಿ; ಅವಳು ಗರ್ಭವತಿಯಾಗುತ್ತಾಳೆ ಎಂಬ ವಿಚಾರವನ್ನು ಇಷ್ಟದೇವರ್ಕಳನ್ನು ಸ್ಮರಿಸುತ್ತ ತೊಡಗುತ್ತಾಳೆ. ಇಲ್ಲಿ ಮಾರನನ್ನು ಸ್ಮರಿಸಿದ್ದು ಗಮನಾರ್ಹವಾಗಿದೆ. ಇದೇ ರೀತಿ ಸಂದರ್ಭಕ್ಕೆ ಸರಿಯಾಗಿ ದೇವತೆಗಳನ್ನು ಸ್ಮರಿಸುವುದು ಜಾನಪದ ಸಾಹಿತ್ಯದ ಒಂದು ವಿಶಿಷ್ಟತೆಯಾಗಿದೆ.

ಒಂದು ದಿವಸ ಭೂಪನಂದಾದಿ ಕುಳಿತಿರೆ
ಕಂದೀದಾನನದೀ ಬಡವಾಗಿ । ಬಡವಾಗಿ ಸತಿ ತನ್ನ
ಮುಂದೆ ನಿಂತಿರಲೂ ನುಡಿಸಿದ ॥ ೩ ॥

ಮಾನಿನಿಮಣಿ ನಿನ್ನ ಆನಾನ ಬಾಡೀಹು
ದೇನೆ ಮೋಹಂನೆ ಗುಣರಂನೆ । ಗುಣರಂನೆಯೆಂದೆಸುತ
ನಾಚುತ ನುಡಿದಾಳರಸಂಗೆ ॥ ೪ ॥

ಆಗ ರಾಣಿಯು ಹೇಳುತ್ತಾಳೆ:

ಸೃಷ್ಟಿಯೊಳಗೆ ನೀವು ಪಟ್ಟವಾಳುತ್ತೀರೆ
ಅಷ್ಟಸೌಭಾಗ್ಯದೊಳಗೆಂದು । ದೊಳಗೆಂದು ಕೊರತೆ ಸ್ವಾಮಿ
ಪುಟ್ಟದರಿ ಸುತರು ನಮಗೀಗ ॥ ೫ ॥

ಇಲ್ಲಿ ಹಾಡು ಚಮತ್ಕಾರದಿಂದ ಓಡುತ್ತದೆ. ರಾಣಿಯು ನಿಜವಾಗಿಯೂ ಬಸುರಿ, ಅವಳ ಮುಖ ಬಾಡಿದೆ. ಆದರೆ ರಾಜನು ಇದನ್ನು

ಪುತ್ರಹಂಬಲವೆಂದೇ ಮೊದಲು ಭಾವಿಸುತ್ತಾನೆ. ರಾಣಿಯೂ ಅದಕ್ಕೆ ಸರಿಯಾಗಿ, ನಾಚಿಕೆಯಿಂದಲೋ ಏನೋ ನುಡಿಯುತ್ತಾಳೆ. ರಾಜನು ಮತ್ತೂ ಅನುಮಾನದಿಂದ ಕೇಳುತ್ತಾನೆ:

ಸರಸೀಜಾಂಬಕಿ ನಿನ್ನ ಗುರುಕುಚ ತುದಿನೋಡೆ
ಕರಿದಾಗಿ ತೋರ್ವ ಪರಿಯೇನೆ | ಪರಿಯೇನೆಂದೆನ್ನೊ
ಳರುಹಾ ಬೇಕವ್ವಾ ಮುದದಿಂದ || ೬ ||

ಅದಕ್ಕುತ್ತರವಾಗಿ ರಾಣಿಯು ನಾಚಿಕೆಯಿಂದ:

ಹಸುರು ಬಣ್ಣದಿ ಕಾಂತಿ ಎಸೆದಿರ್ದ ರವಕೆಯು
ಪೊಸತೊಂದು ತೊಟ್ಟಿಯುದರಿಂದ | ಅದರಿಂದ ಮೊಲೆತುದಿ
ಕೆಸರಾದುದೇನೋ ತಿಳಿಯೆನಾ || ೭ ||

—ಎನ್ನುತ್ತಾಳೆ. ಅನೇಕ ಮಡಿವಂತ ಸಾಹಿತಿಗಳೋ ವಿಮರ್ಶಕರೋ ಇಂಥ ಹಾಡುಗಳನ್ನು ಅಶ್ಲೀಲವೆನ್ನಬಹುದು. ಹಳ್ಳಿಯ ಹಳೆಯ ಹಾಡು ಗಾರ ಹೆಂಗುಸರು ಸತ್ಯಸ್ಥಿತಿಯನ್ನು ಹೀಗೆ ವರ್ಣಿಸಲು ಹಿಂಜರಿಯರು. ಬಸುರಿಯ ಲಕ್ಷಣವು ಹಾಡಲ್ಲಿ ಮತ್ತೂ ಮುಂದುವರಿಯುತ್ತದೆ. ರಾಜನು ಹೇಳುತ್ತಾನೆ—

ಉಟ್ಟ ಬಟ್ಟೆಯು ಹೇಲೆ ಹೊಟ್ಟೆತೋರುತಲಿದೆ
ಹುಟ್ಟುಗರ್ಭಿಣಿಯು ನಿಜವಾಗಿ | ನಿಜವಾಗಿ ನೀನೆಂಬ
ಗುಟ್ಟನಾ ತಿಳಿದೆ ಮನದೊಳು || ೮ ||

ತನ್ನ ರಾಣಿಯು ನಿಜವಾಗಿಯೂ ಗರ್ಭಿಣಿಯೆಂದು ರಾಜನಿಗೆ ದೃಢ ವಾಗುತ್ತದೆ. ಕೊನೆಗೆ ರಾಣಿಯು ನಿರ್ವಾಹವಿಲ್ಲದೆ,

ಕೀರಭಾಷಿಣಿ ಮುದ್ದು ನಾರಿಯು ಬಸುರಿಗೆ
ಆರು ಮಾಸಗಳೂ ಕಳೆದಾವು | ಕಳೆದಾವೆಂದೆನ್ನುತ
ಧಾರುಣಿಪತಿಗೆ ತಿಳಿಸ್ಯಾಳು || ೯ ||

ಹೀಗೆ ರಾಣಿಯು ಗುಟ್ಟನ್ನು ಬಿಚ್ಚುವಾಗ ಅರಸನ ಸಂತೋಷ ಶ್ಯೆಣೆಯಿದೆಯೇ! ಇದನ್ನೇ ಹಾಡುತ್ತಾ,

ಎನಕೇಳೆ ಭೂಮಿಪತಿ ಮನದಿ ಸಂತೋಷಿಸಿ
ವಿನಯದಿ ಸೀಮಂತ ಹವನ | ಹವನವಮಾಳ್ಪರೆ ಶುಭ
ದಿನವ ನಿಶ್ಚಯಿಸಿ ಸೊಬಗಿಂದ || ೧೦ ||

ಬರಿಸಿಚಿತ್ರಕರಿಂದ ಪುರವ ಶೃಂಗರಿಸಿದ
ಪರಿಪರಿವಿಧದಿ ಮುದದಿಂದ । ಮುದದಿಂದ ಮಾಲೆಯ
ಧರಣಿಪಾಲರಿಗೆ ಕಳುಹುತ್ತ ॥ ೧೧ ॥

ಜತೆನೆಂಟರಿಷ್ಟರ ಹಿತಬಂಧು ಬಾಂಧವರ
ಕ್ಷಿತಿಪತಿಯೆಲ್ಲರ ಬರಿಸುತ್ತ । ಬರಿಸುತ್ತ ಸೀಮಂತ
ಅತಿ ಸೊಬಗಿಂದ ವಿರಾಜಿಸೆ ॥ ೧೨ ॥

ರಾಜನ ಮುಂದಿನ ಕಾರ್ಯಗಳನ್ನು ವರ್ಣಿಸುತ್ತಾರೆ. ಇದು ಜನ ಜೀವನದ ಒಂದು ಮುಖ; ಮೊದಲನೆ ಬಸುರಿಗೆ ಆರು ತಿಂಗಳು ಕಳೆಯುತ್ತಲೆ ಸೀಮಂತ ಕಾರ್ಯಕ್ರಮವಿದೆ. ಇದನ್ನೇ ಕನ್ನಡ ಜಿಲ್ಲೆಯಲ್ಲಿ "ಕೋಡಿ", ಅಥವಾ "ಬಯಕೆಯ ಮದುವೆ" ಎಂದು ಕರೆಯುತ್ತಾರೆ. ಇದರಲ್ಲಿ ಹೆಚ್ಚಾಗಿ ಹೆಂಗುಸರ ಚಟುವಟಿಕೆಗಳೇ. ನೆರೆಹೊರೆಯ ಮತ್ತು ಬಂಧು ಬಾಂಧವರ ಕಡೆಯ ಹೆಂಗುಸರೆಲ್ಲ ಬಸುರಿಯ ಮುಂದೆ ಕಲೆಯುತ್ತಾರೆ.

ಮಾನಿನಿಯರು ಕೂಡಿ ಸೀಮಂತಿನೀಯಾಳ
ಸನ್ಮಾನಿಸಿ ಕೇಳಿದಾರಿಷ್ಟವ । ಮನದಿಷ್ಟ ಬಯಕೆಯ
ಪ್ರೇಮದೊಳರುಹು ನಮಾಗೀಗ ॥ ೧೩ ॥

ಏನೇನು ತಿನಲೆಂದು ಮನಸೀಲಿ ನೆನಸಿರ್ಪೆ
ನೀನ್ಯಾಕೆ ಮೌನ ತಳೆದಿರ್ಪೆ । ತಳೆದಿರ್ಪೆ ಎನುತಲಿ
ಸಾನುರಾಗದಲಿ ನುಡಿದಾರು ॥ ೧೪ ॥

ಬಸುರಿಗೆ ತಿನ್ನುವ ಆಸೆ ತುಸು ಹೆಚ್ಚು ಎಂದು ಅವರ ಅನುಭವ. ಇದರಿಂದ ಬಸುರಿಯ ಕೂಡೆ ಪ್ರಶ್ನೆ ಹಾಕುತ್ತಾರೆ. ಈ ಪದ್ಧತಿ ಈಗಲೂ ಇದೆ. ಸೀಮಂತದ ದಿವಸ ಬಸುರಿಯು ಯಾವುದನ್ನೆಲ್ಲ ಇಚ್ಛಿಸುತ್ತಾಳೋ ಅದನ್ನೆಲ್ಲ ಮಾಡಿಕೊಡುತ್ತಾರೆ. ಅಲ್ಲದೆ ಹತ್ತಿರದ ಬಂಧುಗಳು ತಮ್ಮ ತಮ್ಮ ಬಗ್ಗೆ "ಸನ್ಮಾನ" ಮಾಡುವುದೂ ಇದೆ. ಹೆಚ್ಚಾಗಿ ಬಸುರಿಯ ಕೂಡೆ ವಿಚಾರಿಸಿಯೇ ಭಕ್ಷ್ಯಭೋಜ್ಯಗಳನ್ನು ತಯಾರಿಸುತ್ತಾರೆ.

ಗೋಧಿ ಕಡಲೆ ಮಧುವಾದ ಸಕ್ಕರೆಯೊಳಗಾದ
ಭಕ್ಷಗಳಾನು ತಿನಲೆಂದು । ತಿನಲೆಂದಭಿಲಾಷೆ
ಮೋದದ ಕಡುಬ ನೆನವೆಯೋ ॥ ೧೫ ॥

ಕದಳಿ ಕರ್ಜೂರದ ದ್ರಾಕ್ಷೆಯು ಮೊದಲಾದ
ವಿಧವಿಧ ರುಚಿಯು ಫಲಪಕ್ವ । ಫಲಪಕ್ವ ತಿನಲೆಂದು
ಪದುಮದಳಾಕ್ಷಿ ಮನಸಾಯ್ತು ॥ ೧೬ ॥

ಹೀಗೆ ಒಂದೊಂದು ತಿನಿಸುಗಳನ್ನು ವಿಚಾರಿಸುತ್ತ, ಕೊನೆಗೆ,

ರಾಕೇಂದು ವದನೆ ಸುಕೋಕಿಲ ಗಾನೆಗೆ
ಬೇಕಾದ ಮನದ ಬಯಕೆಯ । ಬಯಕೆಯ ಕೊಡಿಸುತ್ತ
ನೇಕ ಸಂಭ್ರಮದಿ ಹರಸ್ಯಾರು ॥ ೧೭ ॥

ಅತ್ತ ಹೆಂಗುಸರ ಕಾರ್ಯಕ್ರಮದೊಂದಿಗೆ ಇತ್ತ ಅರಸನ ಕಲಸವೂ ಇದೆ. ಅವನು ಬಂದ ಅತಿಥಿಗಳನ್ನು ಉಪಚರಿಸಿ ಸತ್ಕರಿಸುತ್ತಾನೆ.

ಇತ್ತ ಭೂಪಾಲಕ ಅರ್ತಿಯೊಳು ಕರವೆತ್ತಿ
ಜಲತಂದು ನಡು ಸಭೆಗಿತ್ತು । ಸಭೆಗಿತ್ತು ಭೋಜನಕೆ
ಹೊತ್ತಾಯಿತೇಳಿರೆನ್ನುತ ॥ ೧೮ ॥

ಭೂರಿವೈಭವದೊಳು ಆರೋಗಣೆಯು ಗೈಸಿ
ಚಾರುಮನ್ನಣೆಯೊಳವರೆಲ್ಲ । ಅವರೆಲ್ಲ ಮನದಿಷ್ಟ
ಧಾರುಣಿಪಾಲ ಕೊಡಿಸಿದ ॥ ೧೯ ॥

ಇದು ಸೀಮಂತದ ವರ್ಣನೆಯಾಯಿತು. ಮತ್ತೆ ರಾಜರಾಣಿಯರಿಬ್ಬರೂ ಸುಖವಾಗಿರುತ್ತ ಪುತ್ರಪ್ರಾಪ್ತಿಯ ಸುದಿನವನ್ನೇ ಕಾಯುತ್ತಿರುತ್ತಾರೆ.

ಈರೀತಿಯೊಳು ಶುಭಕಾರ್ಯವ ಪೂರೈಸಿ
ನಾರಿಯು ಸಹಿತ ಸುಖದಿಂದ । ಸುಖದಿಂದ ಇರುತಿರೆ
ಮೂರಿತ್ತು ನವಮಾಸ ಬಸುರಿಗೆ ॥ ೨೦ ॥

ಬಸುರಿಯ ಗರ್ಭಕ್ಕೆ ಒಂಭತ್ತು ತಿಂಗಳೂ ಕಳೆದುವು. ಆಗಲೇ ಹೆರುವ ಪೂರ್ವಸೂಚನೆಗಳೊಂದೊಂದೇ ಕಾಣಿಸಿಕೊಂಡುವು. ಮುಂದಿನ ಮೂರು ಸೊಲ್ಲುಗಳಲ್ಲಿ ಗರ್ಭಿಣಿಯ ಕಷ್ಟಗಳನ್ನು ಬಲು ಮಾರ್ಮಿಕವಾಗಿ ಹಾಡುತ್ತಾರೆ:

ಮುಡಿದಳೊಂದು ದಿನ ತಡೆಯಲಾರದೆ ಸತಿ
ನಡು ನೋವ ಪರಿಯಾ ಸಖಿಯೊಳು । ಸಖಿಯೊಳು ಪೇಳಿದಳು
ಮಡಲವೇದನೆಯು ನಡುಗುತ್ತ ॥ ೨೧ ॥

ಹಸುತ್ಯಷೆಗಳಃ ಕೆಟ್ಟು ಬಸುರಿಗುಬ್ಬಸ ಹುಟ್ಟಿ
ವಶತಪ್ಪಿತವ್ವ ಅವಯುವ | ಅವಯುವ ನೋಡಲು
ಉಸಿರಲಂಜುವೆನು ಮನದೊಳು || ೨೨ ||

ಎಂತು ಪೇಳಲಿ ನಾನೆಂತು ತಾಳಲಿ ಕಾಂತೆ
ಯೆಂತು ಸೈರಿಸಲಿ ಬಸುರಿನ ವೇದನೆ | ಬಸುರಿನ ವೇದನೆ
ಯೆಂತಾಯ್ತೆಂದು ಪೇಳಲಳವಲ್ಲ || ೨೩ ||

ಇದನ್ನು ದಾಸಿಯರು ಕೇಳಿ ಬಸುರಿಯನ್ನು ಸೂತಿಕಾಗೃಹಕ್ಕೆ ಕರೆದೊಯ್ಯುತ್ತಾರೆ. ಆ ಹಾಡು ಹೀಗಿದೆ:

ಎಂದೆನುತೀಪರಿಯಿಂದಲಿ ಸೂತಿಕ
ಮಂದಿರಕಾಗಿ ನಡೆತಂದು | ನಡೆತಂದು ಶುಭದಲ್ಲಿ
ಕಂದನ ಪಡೆದಳಂಬುಜಾಕ್ಷಿ || ೨೪ ||

ಆಗ ಎಲ್ಲೆಲ್ಲೂ ಸಂತೋಷ, ಗದ್ದಲ. ಜನಿಸಿದ ಸುಕುಮಾರನಿಗೆ ಉತ್ತರೋತ್ತರ ಶುಭವಾಗಲೆಂದು ಪರಮಾತ್ಮನಲ್ಲಿ ಎಲ್ಲರೂ ಕೋರುತ್ತಾರೆ.

ಭಕ್ತವತ್ಸಲ ಕಾಯೊ ನಿತ್ಯ ನಿರ್ಮಲ ಕಾಯೊ
ಸತ್ಯಾತ್ಮ ಕಾಯೊ ಕುವರನ | ಕುವರನ ಸಲಹೆಂದು
ಸತ್ಯದೇವನ ಸ್ತುತಿಸ್ಯಾರು || ೨೫ ||

ಈ ಹಾಡಿನ ಇಂಪು ಹರಡಿದಂತೆ ಮಗುವಿಗೆ ತಂಪು ನಿದ್ರೆ ಬರುತ್ತದೆ. ಮಗು ಸೊಂಪಾಗಿ ನಿದ್ರಿಸಿದಂತೆ, ತಾಯಿ ಏಳುತ್ತಾಳೆ.

೨. ಹೆಂಗರುಳ ಹಾಡು

ಪೆಣ್ಣಿನ ಬಾಳು ಕಣ್ಣೀರೇನೇ—ಎಂಬ ಮಾತು ಒಪ್ಪತಕ್ಕದ್ದೇ. ಆದರೆ ಆ ಕಣ್ಣೀರ ಕೆರೆಯಲ್ಲಿ ನಿರ್ಮಲವಾದ ಕಮಲ ಪುಷ್ಪವು ಅರಳಿ ಬರುತ್ತದಲ್ಲವೇ? ಅಂಥಾ ಕಮಲಗಳ ನಿರ್ಮಾಣವು ಹೆಣ್ಣಿನ ಪಾಲಿನದ್ದಾಗಿದೆ. ಇಡೀ ಸಮಾಜದ ಭವಿಷ್ಯವೇ ಆಕೆಯ ಮೇಲಿದೆಯೆಂದರೂ ತಪ್ಪಾಗದು. ಆಕೆಯ ಮುಂದೆ ನೂರಾರು ಸಮಸ್ಯೆಗಳಿವೆ. ಹೆಣ್ಣಾಗಿ ಹುಟ್ಟಿದ ಬಡವಿಯು ಹೆರವರ ಮನೆ ಸೇರಿ, ಅಲ್ಲಿಗೆ ಹೊಂದಿಕೆಯಾಗಿ,

ಹೆತ್ತಬ್ಬೆಗಾಗಿ ಬಯಸಿ, ಹೊತ್ತಬ್ಬೆಯಾಗಿ ಶ್ರಮಿಸಿ, ಸಮಾಜವನ್ನು ಉದ್ಧರಿಸಬೇಕಾಗಿದೆ. ಇಂಥ ಹೆಣ್ಣಿನ ಪಾಡು ಹೆಂಗರುಳ ಹಾಡಾಗುತ್ತದೆ. ಅವುಗಳಲ್ಲಿ ಕೆಲವನ್ನು ಈ ಕೆಳಗೆ ಸಂಗ್ರಹಿಸಿದ್ದೇನೆ.

ಹೆಣ್ಣ ಹೆತ್ತಬ್ಬೆಗೆ ಒಮ್ಮೆಯೂ ಸುಖವಿಲ್ಲ
ಬಣ್ಣವನಳಿಸಿ ಬಳಕಳುಹಿ ಹೋಪಾಗ
ಕಣ್ಣು ನೀರೆರೆದು ಕೊಡಲಾಗ ॥ ೧ ॥

ಹೆಣ್ಣು ಹುಟ್ಟಿತ್ತೆಂದು ಅಣ್ಣ ಚಿಂತಿಸಬೇಡ
ಹೆಣ್ಣೆಂಬ ಪರರ ಒಡವೆಯು ಕೊಟ್ಟಾರೆ
ಹೋಪಲಕ್ಕು ನಮಗೆ ಬರಲಕ್ಕು ॥ ೨ ॥

ತಾಯಿದ್ದರೆ ತವರ್ಮನೆ ನೀರಿದ್ದರೆ ಕೆರೆಬಾವಿ
ತಾಯಿಯಿಲ್ಲದ ತವರಿಂಗೆ ಹೋದರೆ
ಕಾಲಡಿ ಕಸವಿನಂತಕ್ಕು ॥ ೩ ॥

ಬಂಗಾರು ಕಾದುದ್ದ ಬೆಳ್ಳಿ ತಾವರೆ ಮುದ್ದು
ಹೆಣ್ಣುಳ್ಳ ಮರಕೆ ಗಿಳಿಮುದ್ದು ತಾನಾದರೆ
ತಾ ಮುದ್ದು ತನ್ನ ತವರಿಂಗೆ ॥ ೪ ॥

ಉದ್ದ ಸಂಪಿಗೆ ಮೊಗ್ಗು ದುಂಡುಮಲ್ಲಿಗೆ ಹೂಗು
ಬುದ್ಧಿವಂತನಣ್ಣ ಕೊಯ್ತಕ್ಕು ಆ ಹೂಗು
ಮುದ್ದು ತಂಗ್ಯಂದ್ರ ತುರುಬಿಂಗೆ ॥ ೫ ॥

ಬಡತನವೆ ನೀಯೆನ್ನ ಬಿಡದೆ ಬೆನ್ನಲಿ ಬಂದೆ
ಕಡುಕಷ್ಟಗೊಳಿಸಿ ಪಣೆಸಿದೆ ಹೊನ್ನುಳ್ಳ
ಹೊಲೆಯಂಗೆ ಕೈಯ್ಯ ಮುಗಿಸಿದೆ ॥ ೬ ॥

ಹಸುವಾಯಿತೆಂದರೆ ದೆಸೆಯೊಳೊಬ್ಬರ ಕಾಣೆ
ಹಸುವಾ ಬಲ್ಲಬ್ಬೆ ಒಳಗಿಲ್ಲ ಹೊರಗಿಲ್ಲ
ದೆಸೆ ನೋಡಿ ಬಾಳ ಬಡವಾದೆ ॥ ೭ ॥

ಬಿದ್ದರೆತ್ತುವರಿಲ್ಲ ಬೆನ್ನ ತಾಂಗುವರಿಲ್ಲ
ಆ ನಿದ್ದೆ ಎಂಬ ಹಿತರಿಲ್ಲ ದೇವರೆ
ತಾಯಂತೆ ನೀವೆ ಸಲಹಿರೊ ॥ ೮ ॥

ಎಲ್ಲೋರ ಮಕ್ಕೋಗೆ ಜೆಲ್ಲ ಬಾಳೆಯ ಹಣ್ಣು
ಏನೂ ಇಲ್ಲದ್ದ ಬಡವರ ಮಕ್ಕೋಗೆ
ಕೆಳ್ಳವಿನ ಮೇಲೆ ಹೆರೆ ತುಪ್ಪ ‖ ೯ ‖

ಸಣ್ಣ ಸಣ್ಣ ಮಕ್ಕೋಗೆ ಕುಸುಮಾದ ಕೂಲಾಯಿ
ಹೊನ್ನ ಜನಿವಾರ ಕೊರಳಿಂಗೆ ಬಾಲಂಗೆ
ಹೊನ್ನಿಲಿ ಸವೆದ ಮಣಿ ಬೇಕು ‖ ೧೦ ‖

ಒಡಹುಟ್ಟು ಒಂದು ಜನ್ಮ ಕಡೆಗೆ ಜನ್ಮಗಳಿಲ್ಲೆ
ಕಡುಕೋಪ ಬೇಡೋ ಹರಿಯಣ್ಣ ಕಡೆಗೆನ್ನ
ಕರಕೊಂಡು ಹೋಗೋ ತವರಿಂಗೆ ‖ ೧೧ ‖

ಸುಗ್ಗಿ ಕೈಕೊಯ್ಯಲಿ ಸುರಗಿಹೂವಾಗಲಿ
ರಸದಾಳಿ ಕಬ್ಬು ಕಡಿಯಲಿ ಅಣ್ಣನೆ
ಅಂದಿಂಗಾ ಬಪ್ಪೆ ತವರಿಂಗೆ ‖ ೧೨ ‖

ಮಣ್ಣನ್ನು ನಂಬುವೆ ಮಣ್ಣಿಂದ ಬದುಕುವೆ
ಮಣ್ಣೆನಗೆ ಮುಂದೆ ಹೊನ್ನ ಕೊಡುಗು ಅಣ್ಣಯ್ಯ
ಮಣ್ಣೆ ಲೋಕದಲಿ ಬೆಳೆ ಬಾಳ್ಗ ‖ ೧೩ ‖

ತುಪ್ಪಶನ ಉಂಬೋಲೆ ತುಳುನಾಡಿಂಗ್ಹೊಯೆಕ್ಕು
ಅಕ್ಕಿಯ ಮೇಲೆ ಬರೆಯಿಲ್ಲೆ ತುಳುನಾಡ
ಮಕ್ಕಳ ಮೇಲೆ ಕಲೆಯಿಲ್ಲೆ ‖ ೧೪ ‖

ತುಂಬಿ ತುಳುನಾಡಿಂದ ಬಂದವೆರಡು ದನ
ಕೊಂಬಿಂಗೆ ಚೌರಿ ಕಿರಿಗೆಜ್ಜೆ ಕಟ್ಟಿಕೊಂಡು
ಬಂದವು ನಮ್ಮ ಬೈಲಿಂಗೆ ‖ ೧೫ ‖

ಬಲ್ಲಾಳು ಹಿತ್ತೀಲ ಬಳ್ಳೀಯ ಹೆಸರೇನು
ಬೆಳ್ಳಿಯಾ ದಂಡೆ ಬಿಡು ನೀರ ಹಿತ್ತೀಲ
ಬಲ್ಲಾಳು ತಿಂಬ ಬಿಳಿಯೆಲೆ ‖ ೧೬ ‖

ಕಣ್ಣು ಕಾಣದ ಹಕ್ಕಿ ಹಣ್ಣುಳ್ಳವನಕ್ಹೋಗಿ
ಹಣ್ಣೆಂದು ಮೆಲುಗು ಕಸಕಾಯ ಆ ಹಕ್ಕಿ
ಹಾಲೆಂದು ಕುಡಿಗು ಹನಿನೀರ ‖ ೧೭ ‖

ಮಕ್ಕಳಾಟಿಕೆ ಚೆಂದ ಮರುಳು ಬುದ್ಧಿಯು ಚೆಂದ
ಎಳೆಗರ್ಭದವಳ ಮುಖ ಚೆಂದ ಮಗನಾ
ತೊಳೆದು ಬರುವ ನಡೆ ಚೆಂದ ॥ ೧೮ ॥

ಹಟ್ಟಿ ಕೊಟ್ಟಿಗೆ ಚೆಂದ ಹರದರಂಗಡಿ ಚೆಂದ
ಬೆಟ್ಟಕ್ಕೆ ಬಿದುರು ಕೊಡಿ ಚೆಂದ । ಕಿರುಬಾಲೆ
ಎಷ್ಟು ಚೆಂದನೀ ಬಳಗಕ್ಕೆ ॥ ೧೯ ॥

ನಿದ್ದೆ ಬಾರದ ಕಣ್ಣ ಮುದ್ದಾರು ಬಲ್ಲೀರೊ
ಗದ್ದೆಯಾ ತಡಿಯಾ ಗರುಗನಾ ಕೊಡಿ ಕಂಡು
ಸೌಭದ್ರೆ ಕಾಡೀಗೆ ಇಡಿಹಚ್ಚು ॥ ೨೦ ॥

ಸಂಜೆಯು ಹೊತ್ತಿಂಗೆ ಮಕ್ಕಳ ಬೈಯ್ಯಡಿರಿ
ಎಂಜಲು ಮೈಲಿಗೆಯ ಎಡಕೊತ್ತಿ ಒತ್ತಿ
ಸಂಜೆ ನೀರೆರೆದು ದೆನಿಗೋಳ್ವ ॥ ೨೧ ॥

ಸಂಜೆಯ ಹೊತ್ತಿಂಗೆ ಅಂಗ್‌ಬಾಯ್ ತೆಗೆವೊ
ಪಾಪಿಯಾ ಅಂತವಳ ಮನೆಯಲ್ಲಿ ಬಂದು
ನಿಲ್ಲಾಳು ಮಹಾಲಕ್ಷ್ಮಿ ॥ ೨೨ ॥

ದೇವಾರ ನೆನೆದರೆ ಸಾವ್ಹುಟ್ಟು ನಮಗಿಲ್ಲೆ
ಹಾವಾ ತುಳಿದರೆ ಭಯವಿಲ್ಲೆ ಸರ್ಪನಾ
ಹೆಡೆತಲೆಯ ಮೇಲೆ ವಿಷವಿಲ್ಲೆ ॥ ೨೩ ॥

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು ಬಾಲನೀ
ಜ್ಯೋತಿಯೇ ಆಗು ಜಗಕೆಲ್ಲ ॥ ೨೪ ॥

೩. ಶ್ರೀಕೃಷ್ಣ-ಸತ್ಯಭಾಮಾ ಸಂವಾದ

ಸರಸ ವಿರಸಗಳ ಸಮ್ಮಿಲನವೇ ಜೀವನ. ಒಮ್ಮೆ ಸರಸವೆಂದು ಕಂಡ ಬಾಳುವೆಯಲ್ಲಿ ಮತ್ತೊಮ್ಮೆ ವಿರಳವೆದ್ದು ತೋರುತ್ತದೆ. ಬಂಗಾರ
ವಾದ ಬದುಕು ಕಾದ ಕಬ್ಬಿಣವಾಗುವುದೂ ಇದೆ. ವಿರಸವೇ ಸರಸದ

ಕೊನೆಯಾದಂತೆ ವಿರಸವೇ ಸರಸದ ಅಂತ್ಯವಾಗುವುದೂ ಇದೆ. ಅಂತೂ ಕವಿವರ ಬೇಂದ್ರೆಯವರ ಅಮರವಾಣಿಯಂತೆ—ರಸವೆ ಜನನ, ವಿರಸ ಮರಣ, ಸಮರಸವೆ ಜೀವನವಾಗಿದೆ. ಪ್ರಾಯಶಃ ಗಂಡು ಹೆಣ್ಣಿನ ದಾಂಪತ್ಯ ಜೀವನದಲ್ಲಿ ಇಂತಹ ಸಂದರ್ಭವೇ ಹೆಚ್ಚು. ಹೊತ್ತೇರುವಂತೆ ವಿರಸ ಮೀರಿದರೂ ಹೊತ್ತಿಳಿದಂತೆ ಅದೂ ಇಳಿದು ಕೊನೆಗೆ ಸರಸವಾಗುತ್ತದೆ. ಇದು ಇಂದು ನಿನ್ನೆಯ ಅನುಭವವಲ್ಲ; ಜಗತ್ತಿನ ಆದಿಯಲ್ಲೇ ಹೀಗಿತ್ತು. ಈಗಲೂ ಹಾಗೆಯೇ ಇದೆ. ಮಾನವ ಜಗತ್ತಿನ ಬಾಹ್ಯ ಬದಲಾವಣೆಯೇನೋ ಆಗಿರಬಹುದು. ಆದರೆ ಹಿಂದೆ ಇದ್ದ ಆಂತರಿಕ ಗುಣ ಇಂದೂ ತದ್ರೂಪದಲ್ಲೇ ಇದೆ. ಇದನ್ನು ನಮ್ಮ ಹಿಂದಿನ ಸಾಹಿತ್ಯಗಳು ಸಾರಿಹೇಳುತ್ತಿವೆ. ಮಾನವತೆಯ ನೈಜ ಚಿತ್ರಣವನ್ನು ತಿಳಿಸುವ ಜಾನಪದ ಸಾಹಿತ್ಯದ ನೆರವು ನಮ್ಮ ಪಾಲಿಗಿದೆ.

ಪ್ರಸ್ತುತ ಲೇಖನದಲ್ಲಿ ಶ್ರೀಕೃಷ್ಣ-ಸತ್ಯಭಾಮೆಯರ ಚತುರುಕ್ತಿಗಳ ಸಂಭಾಷಣೆಯನ್ನು ಕೊಡಲಾಗಿದೆ. ಜಾಣೆಯಾದ ಮಡದಿಯು ವಿರಸವನ್ನೂ ಹೇಗೆ ಸರಸವನ್ನಾಗಿ ಪರಿವರ್ತಿಸಿಕೊಳ್ಳುವಳೆಂಬುದನ್ನು ಇಲ್ಲಿ [illegible]ಬಹುದು. ಇಲ್ಲಿ ನಾಯಕನು ಶ್ರೀಕೃಷ್ಣ, ನಾಯಿಕೆ ಸತ್ಯಭಾಮೆ. ಇವರಿಬ್ಬರ ಸಂಭಾಷಣಾ ರೂಪವಾಗಿ ಹಾಡು ಹರಿಯುತ್ತದೆ. ಮೊದಲಾಗಿ ಸತಿ ಸತ್ಯಭಾಮೆಯು ತನ್ನ ಪತಿಯಲ್ಲಿ ಅನುಮಾನಿಸಿ ಪ್ರಶ್ನಿಸುತ್ತಾಳೆ:

ಬದ್ಧಗಾರನು ಬಾಳ ನಂಬಿದೆ ಸ್ವಾಮಿ
ಬಿದ್ದ ಗಾಯಗಳೇನು ಹೇಳಿರಿ ಸ್ವಾಮಿ
ಬಿದ್ದ ಗಾಯಗಳೇನು ಹೇಳಿ ॥ ೧ ॥

ಸತ್ಯಭಾಮೆ, ಕೃಷ್ಣನನ್ನು ಕೆಣಕುವಂತೆ ಒತ್ತಿ ಕೇಳುತ್ತಾಳೆ:

ಉಗುರುಗುರಿನ ಗಾಯ ಉಗುರಿನ ಮೊನೆ ಗಾಯ
ಚಿಲುಗುರಿನ ಗಾಯವೇ ಹೇಳಿರಿ ಸ್ವಾಮಿ
ಚಿಲುಗುರಿನ ಗಾಯವೇ ಹೇಳಿ ॥ ೨ ॥

ಸುಗುಣೆಯಾದ ಸ್ತ್ರೀಯು ದಿವ್ಯ ವ್ಯಕ್ತಿತ್ವದ ಪರಿಚಯವಿಲ್ಲದೆ ಅಣಕ ಮಾಡುತ್ತಾಳೆ. ಶಬ್ದ ಚಮತ್ಕಾರದಿಂದ ಗಂಡನನ್ನು ಮಾತಾಡಿಸುತ್ತಾಳೆ. ಆಗ ಅವನಿಗೆ ಸಿಟ್ಟು ಬರುವುದಿಲ್ಲ. ಕೋಪಕ್ಕೆ ಅಲ್ಲಿ ಎಡೆ ಇಲ್ಲ. ಇದರಿಂದ

ಗಂಡಸಾದ ಶ್ರೀಕೃಷ್ಣನು ಏನೋ ಸುಳ್ಳು ನೆಪ ಹೇಳಲು ತೊಡಗುತ್ತಾನೆ. ಶ್ರೀಕೃಷ್ಣನನ್ನು ಚೆನ್ನಾಗಿ ಬಲ್ಲ ಸತ್ಯಭಾಮೆ ಪುನಃ ಪ್ರಶ್ನಿಸುತ್ತಾಳೆ:

ನೆಟ್ಟಿರ್ದ ಗಜನಿಂಬೆ ಮರವೇರಿ ಕೊಯ್ಯುವಾಗ
ಮುಳ್ಳು ಕುಟ್ಟಿದ ಗಾಯ ಕೇಳೆಲೆ ಜಾಣೆ
ಮುಳ್ಳು ಕುಟ್ಟಿದ ಗಾಯವೆ || ೩ ||

ಕಾಮುಕ ಜನರ ಒಂದು ವರ್ಣನೆ ಇಲ್ಲಿದೆ ಎನ್ನಬಹುದು. ಪಾಳು ದಾರಿಗಳಿಂದ ಗಂಡನು ತನ್ನ ಗುಟ್ಟನ್ನಡಗಿಸಿ ಮಡದಿ ಮುನಿಯದಂತೆ ಮಾತಾಡುತ್ತಾನೆ. ಗಂಡನಿಗಿಂತ ಹೆಂಡತಿ ಕಡು ಜಾಣೆ ಎಂಬಂತೆ ಪತಿಯನ್ನು ಪತ್ನಿಯು ಮತ್ತೂ ಪ್ರಶ್ನಿಸುತ್ತಾಳೆ:

ಕುಟಿಲ ಸೋಜಿಗವೇನು ವಯನ ಕೆಂಪಡರಿತು
ಕುಟಿಲವೆ ಪೇಳೆನಗೆ ಹೇಳಿರಿ ಸ್ವಾಮಿ
ಕುಟಿಲವೆ ಪೇಳೆನಗೆ ಹೇಳಿ || ೪ ||

ಶ್ರೀಕೃಷ್ಣನ ಮುಖಚರ್ಯೆಯೇ ಸತ್ಯಸ್ಥಿತಿಯನ್ನು ಸಾರುತ್ತಿತ್ತು. ಇದರಿಂದ ಸತ್ಯಭಾಮೆಯು ಅನುಮಾನಿಸದಂತೆ ಶ್ರೀಕೃಷ್ಣ ಹೇಳುತ್ತಾನೆ:

ಮಧ್ಯಾಹ್ನ ಹೊತ್ತೀಲಿ ಗೆಳೆಯರೆಲ್ಲರು ಕೂಡಿ
ಭಂಗಿಯ ಸೇದಿದೆ ಕೇಳೆಲೆ ಜಾಣೆ
ಭಂಗಿಯ ಸೇದಿದೆ ಕೇಳಿ || ೫ ||

ಇನ್ನು ವ್ಯಂಗ ಪ್ರಶ್ನೆಯು ಫಲಿಸದೆಂದು ಮನಗಂಡು ಸತ್ಯಭಾಮೆಯು ಶ್ರೀಕೃಷ್ಣನೊಡನೆ ತುಸು ಗಡುಸಾಗಿ ಕೇಳುತ್ತಾಳೆ:

ಅರ್ಧವು ರಾತ್ರೀಲಿ ನಿದ್ದೆಯ ಹೊತ್ತೀಲಿ
ಎದ್ದೆಲ್ಲಿ ಪೋದೀರಿ ಹೇಳಿರಿ ಸ್ವಾಮಿ
ಎದ್ದೆಲ್ಲಿ ಪೋದೀರಿ ಹೇಳಿ || ೬ ||

ಆಗ ಶ್ರೀಕೃಷ್ಣನು ನಗುಮೊಗದಿಂದ ಹೇಳುತ್ತಾನೆ:

ಬೇಸಗೆ ಬಿಸಿಲಲ್ಲಿ ತಿರುಗಿ ಮೈಬೆವರೀತು
ಎದ್ದಾಚೆ ಹೋಗಿದ್ದೆ ಕೇಳೆಲೆ ಜಾಣೆ
ಎದ್ದಾಚೆ ಹೋಗಿದ್ದೆ ಕೇಳಿ || ೭ ||

ಗಂಡನ ಮಾತಿನಲ್ಲಿ ಸತ್ಯವನ್ನು ಕಾಣದಂತೆ ನಟಿಸಿ ಸತ್ಯಭಾಮೆಯು ಮುಂದೆ ನೇರವಾಗಿ ಪ್ರಶ್ನಿಸುತ್ತಾಳೆ:

ನಾವು ನಿಮ್ಮ ಕೊರಳಲ್ಲಿ ನೀವು ಸೂಳೆಮನೆಯಲ್ಲಿ
ಹಾವನ್ನು ಹಿಡಿದೀರೆ ಹೇಳಿರಿ ಸ್ವಾಮಿ
ಹಾವನ್ನು ಹಿಡಿದೀರೆ ಹೇಳಿ ॥ ೮ ॥

ಎಷ್ಟೊಂದು ಅರ್ಥಗರ್ಭಿತವೂ ಮಾರ್ಮಿಕವೂ ಆಗಿದೆ ಈ ಮಾತು! ಸೂಳೆಗಾರಿಕೆಯು ಬಲು ದೊಡ್ಡ ವಿಪತ್ತನ್ನು ಸೂಕ್ಷ್ಮವಾಗಿ ಇಲ್ಲಿ ಹೇಳಿದೆ. ಹಳ್ಳಿಯ ಹಳೇ ಹಾಡುಗಳಲ್ಲಿ ಇಂಥಾ ವೈಶಿಷ್ಟ್ಯವನ್ನು ಹೆಜ್ಜೆ ಹೆಜ್ಜೆಗೂ ಕಾಣಬಹುದು. ಸತ್ಯಭಾಮೆಯು ಇಷ್ಟು ನುಡಿದು ಗಂಡನನ್ನು ಮತ್ತೂ ಒತ್ತಾಯಿಸುತ್ತಾಳೆ. ಅವನ ಮೂರ್ಖ ಬುದ್ಧಿಗಾಗಿ ಪಶ್ಚಾತ್ತಾಪ ನಟಿಸುತ್ತಾಳೆ.

ಎಷ್ಟು ಹೇಳಿದರು ನೀವು ಮೂರ್ಖಬುದ್ಧಿಯ ಬಿಡಿ
ಹೋಗಲಿಲ್ಲವೆ ನೀವು ಸೂಳೆಯ ಮನೆಗೆ
ಹೋಗಲಿಲ್ಲವೆ ನೀವು ಹೇಳಿ ॥ ೯ ॥

ಇಷ್ಟಾದರು ಶ್ರೀಕೃಷ್ಣನು ಒಪ್ಪುವುದಿಲ್ಲ! ಕೊನೆಗೆ ಸತ್ಯಭಾಮೆಯು,

ಕಾಶಿವಿಶ್ವನಾಥನ ಗುಡಿಯ ಮುಂದಕೆ ನಾನು
ಭಾಷೆಯ ಮಾಡಿಸುವೆ ಹೇಳಿರೆ ಸ್ವಾಮಿ
ಭಾಷೆಯ ಮಾಡಿಸುವೆ ಹೇಳಿ ॥ ೧೦ ॥

ಹೀಗೆ ಕೊರಗುವಾಗ ಅವನ ಮನಸ್ಸು ಕರಗುತ್ತದೆ. ಅವಳಿಗೆ ಧೈರ್ಯವಾಗುವಂತೆ ಭಾಷೆಕೊಡುತ್ತಾನೆ:

ಕೇಳಲೆ ಜಾಣೆ ನಾನಿನ್ನ ಹೊರತು ಬೇರೆಯೋರ
ಎಂದಿಗೂ ನೋಡಲಿಲ್ಲ, ಈಶ್ವರನಾಣೆ,
ಎಂದಿಗೂ ನಾನೋಡ್ವುದಿಲ್ಲ ॥ ೧೧ ॥

ಇಲ್ಲಿ ತಾನು ಇತರರನ್ನು ಎಂದೂ ನೋಡಿಲ್ಲವೆಂದನಾದರೂ ಕೊನೆಗೆ ಈಶ್ವರನಾಣೆಯಿಟ್ಟು "ಎಂದಿಗೂ ನೋಡುವುದಿಲ್ಲ" ವೆಂದು ಹೇಳುವ ಮಾತು ಬಲು ಚಮತ್ಕಾರವಾಗಿದೆ. ಜಾನಪದ ಸಾಹಿತ್ಯದಲ್ಲಿ ರಸಿಕತನದ ಒಂದು ಮಾದರಿಯಾಗಿ ಮೇಲಿನ ಹಾಡುಗಳಿವೆ.

ಒಂದಾಣೆ ಮಾಲೆಯಲ್ಲಿ

ಒಗಟುಗಳ ಪ್ರಕಟಣೆಗಳು:

ಒಗಟುಗಳು
(ಪುಸ್ತಕ ನಂಬ್ರ 17)

ಜಾಣ್ಮೆಯ ಒಗಟುಗಳು
(ಪುಸ್ತಕ ನಂಬ್ರ 29)

ಒಗಟಿನ ಗೊಂಚಲು
(ಪುಸ್ತಕ ನಂಬ್ರ 104)

ಒಂದಾಣೆ ಮಾಲೆ, ಪ್ರಭಾತ ಆಫೀಸು,
ರಥಬೀದಿ, ಮಂಗಳೂರು-೧.

Edited, Printed & Published by K. V. Shenoy
at The Prabhat Printers, Ltd., Mangalore.